ಓ.ಎಸ್ ನಂ. 21/2020

ಪಿ.ಡಬ್ಲ್ಯೂ: 1

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 07-08-2024 ರಂದು ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಕೆ ಜಿ ನ್ಯಾಯವಾದಿರವರಿಂದಃ**

ನಮ್ಮ ಕುಟುಂಬದಲ್ಲಿ 1994 ರಲ್ಲಿ ಹಿಸ್ಸೆ ಆಗಿರುತ್ತದೆ . ಮಲ್ಲನಜಡ್ಡಿ ಗ್ರಾಮದ ಸರ್ವೆ ನಂಬರ್ 39 ನನ್ನ ಪಾಲಿಗೆ ಬಂದಿರುತ್ತದೆ .ಸರ್ವೆ ನಂಬರ್ 36 ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ . ಸದ್ರಿ ಸರ್ವೆ ನಂಬರ್ ಗಳು 39 ಹಾಗೂ 36 ಒಂದಕ್ಕೊಂದು ಕೂಡಿಕೊಂಡು ಇದೆ ಎಂದರೆ ಸರಿ . ಹಿಸ್ಸೆ ಆದಾಗಿನಿಂದ ಸರ್ವೆ ನಂಬರ್ 39 ರ 00-10-08 ಕ್ಷೇತ್ರವು ಸರ್ವೆ ನಂಬರ್ 36 ಕ್ಕೆ ಅಂಟಿಕೊಂಡಿದೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು ಸರ್ವೆ ನಂಬರ್ 39 ರ 00-10-08 ಕ್ಷೇತ್ರವು ಸರ್ವೆ ನಂಬರ್ 36 ಕ್ಕೆ ಸೇರಿಕೊಂಡಿದೆ ಎಂದು ನುಡಿಯುತ್ತಾರೆ. ನಮಗೆ ಸದ್ರಿ 00-10-08 ಕ್ಷೇತ್ರವು ಸರ್ವೆ ನಂಬರ್ 36 ಕ್ಕೆ ಸೇರಿಕೊಂಡಿರುವ ವಿಷಯ 2011 ರಲ್ಲಿ ತಿಳಿದಿರುತ್ತದೆ . ಅಂದಿನಿಂದಲೂ ಸದ್ರಿ 00-10-08 ಕ್ಷೇತ್ರವು ಪ್ರತಿವಾದಿಯವರ ಕಬಜೆಯಲ್ಲಿರುವುದು ನನಗೆ ತಿಳಿದಿರುತ್ತದೆ . ನಮ್ಮ ಕುಟುಂಬದಲ್ಲಿ ಹಿಸ್ಸೆ ಆದಾಗಿನಿಂದ ಪ್ರತಿವಾದಿಯು ಸರ್ವೆ ನಂಬರ್ 36 ಹಾಗೂ ಸದ್ರಿ 00-10-08 ಕ್ಷೇತ್ರವನ್ನು ಸೇರಿಸಿಕೊಂಡು ವಹಿವಾಟಿ ಮಾಡಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸರ್ವೆ ನಂಬರ್ 39 ಹಾಗೂ 36 ಇನ್ನಿತರೆ ಜಮೀನುಗಳನ್ನು ನಾನೇ ವಹಿವಾಟಿ ಮಾಡಿಕೊಂಡು ಬಂದು ಅಭಿವೃದ್ಧಿ ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ . ಸದ್ರಿ ಸರ್ವೆ ನಂಬರ್ 39 ರ 00-10-08 ಕ್ಷೇತ್ರದಲ್ಲಿ ಅಡಿಕೆ ಮರಗಳು ಇದೆ . ನಿಪಿ-3 ಹದ್ ಬಸ್ತ್ ಮಾಡುವ ಪೂರ್ವದಲ್ಲಿ ಪ್ರತಿವಾದಿಯವರಿಗೆ ನೋಟಿಸು ಕೊಟ್ಟು ಮಾಡಿದ ಹದಬಸ್ತ್ ಆಗಿರುತ್ತದೆಯಾ ಎಂದರೆ ಸಾಕ್ಷಿಯು ಸದ್ರಿ ನೋಟಿಸು ಪ್ರತಿವಾದಿಯವರಿಗೆ ಮುಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ . ನಿಪಿ-3 ಹದ್ ಬಸ್ತ್ ಮಾಡಿರುವ ವಿಚಾರ ಪ್ರತಿವಾದಿಯವರಿಗೆ ತಿಳಿದಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯು ಹದ್ ಬಸ್ತ್ ಮಾಡುವ ಕಾಲಕ್ಕೆ ಅಲ್ಲಿಯೇ ಇದ್ದನು ಎಂದು ನುಡಿಯುತ್ತಾರೆ .

ನಿಪಿ-3 ರಲ್ಲಿ 00-10-08 ಕ್ಷೇತ್ರವು ಒತ್ತುವರಿ ಆಗಿರುವುದು ಸರ್ವೆ ನಂಬರ್ 36 ರ ಪೂರ್ವ ದಿಕ್ಕಿನಿಂದ ಬರಬೇಕು . ಸರ್ವೆ ನಂಬರ್ 36 ರ ಪಶ್ಚಿಮ ದಿಕ್ಕಿಗೆ ಸರ್ವೆ ನಂಬರ್ 39 ಬರುತ್ತದೆ . ನಿಪಿ-3 ರಲ್ಲಿ ಯಾವ ಜಾಗದಿಂದ ಎಷ್ಟು ಮೀಟರ್ ಒತ್ತುವರಿ ಬರಬೇಕೆಂದು ನಮೂದು ಆಗಿರುವುದಿಲ್ಲ . ನಿಪಿ-3 ಹದ್ ಬಸ್ತ್ ಮಾಡುವ ಕಾಲಕ್ಕೆ ಪಂಚನಾಮೆ ಮಾಡಿದ್ದರಾ ಎಂದರೆ ಸಾಕ್ಷಿಯು ನಮ್ಮ ಸಹಿಗಳನ್ನು ಪಡೆದಿರುತ್ತಾರೆ ಆದರೆ ಪ್ರತಿವಾದಿಯು ಸಹಿಯನ್ನು ಹಾಕಲು ನಿರಾಕರಿಸಿರುತ್ತಾರೆ ಎಂದು ನುಡಿಯುತ್ತಾರೆ ಪಂಚನಾಮೆ ಆಗಿರುವು ಬಗ್ಗೆ ಹಾಗೂ ನಾವು ಸಹಿ ಹಾಕಿರುವ ಬಗ್ಗೆ ಯಾವುದಾದರು ದಾಖಲಾತಿಗಳನ್ನು ಹಾಜರಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ . ನಿಪಿ-3 ಹದಬಸ್ತ್ ನಕಾಶೆಯನ್ನು ಎಲ್ಲಿ ತಯಾರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ .

ಓ.ಎಸ್ ನಂ. 21/2020

ಪಿ.ಡಬ್ಲ್ಯೂ: 1



ನಮ್ಮ ವಾದ ಪತ್ರದಲ್ಲಿ ಸರ್ವೆ ನಂಬರ್ 39 ರಲ್ಲಿ 00–10–08 ಕ್ಷೇತ್ರವು ನಮಗೆ ಬರಬೇಕೆಂದು ತೋರಿಸಿರುತ್ತೇವೆ . ಸರ್ವೆ ನಂಬರ್ 39 ಒಟ್ಟು 01–02–00 ಕ್ಷೇತ್ರ ಜಮೀನಾಗಿರುತ್ತದೆ ಹಾಗೂ ಅದರ ಚೆಕ್ ಬಂದಿಯನ್ನು ಹೇಳಲು ನನಗೆ ಈಗ ಆಗುವುದಿಲ್ಲ .

**ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಾಶ ಕೋರಿದ್ದು , ಸಮಯಾವಕಾಶ ನೀಡಿ ಮುಂದೂಡಲಾಯಿತು .**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**